ಪ್ರಕಟನೆ.

ಮೈಸೂರು ಡಿಸ್ಟ್ರಿಕ್ಟ್ ಗುಂಡ್ಲು ಪೇಟೆ ತಾಲ್ಲೂಕಿನಲ್ಲಿರುವ ಹೆಗ್ಗವಾಡಿ ಬ್ಲಾಕ್ I‌ನೆ ಜಂಗಲಿಯನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸ॥ 1909‌ನೆ ಇಸವಿ ಮೇ ತಾರೀಖು 20‌ನೆ ಮೈಸೂರು ಗೆಜೆಟ್ಟಿನ 2‌ನೆ ಭಾಗದ 395, 396‌ನೆ ಪೇಜಿನಲ್ಲಿ ವಿಕದವಾಗಿ ವಿವರಿಸಲ್ಪಟ್ಟಿರುತ್ತೆ.

ಮೈಸೂರು ಡಿಸ್ಟ್ರಿಕ್ಟ್ ಗುಂಡ್ಲು ಪೇಟೆ ಮತ್ತು ಚಾಮರಾಜನಗರ ತಾಲ್ಲೂಕುನಲ್ಲಿರುವ ಹೆಗ್ಗವಾಡಿ ಬ್ಲಾಕ್ II‌ನೆ ಜಂಗಲಿಯನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸ॥ 1909‌ನೆ ಇಸವಿ ಮೇ ತಾರೀಖು 20‌ನೆ ಮೈಸೂರು ಗೆಜೆಟ್ 2‌ನೆ ಭಾಗದ 396, 397‌ನೆ ಪೇಜಿನಲ್ಲಿ ವಿಕದವಾಗಿ ವಿವರಿಸಲ್ಪಟ್ಟಿರುತ್ತೆ.

ಎಂ. ಶಾಮರಾವ್, ಫಾರೆಸ್ಟ್ಸ್ ಸೆಟ್ಲ್‌ಮೆಂಟ್ ಆಫಿಸರ್ ಇ॥ ಮೈಸೂರು.

ಬೆಂಗಳೂರು ಡಿಸ್ಟ್ರಿಕ್ಟ್.
ನೋಟಿಫಿಕೇಷ್ನ್.

ತಾರೀಖು 30‌ನೆ ಏಪ್ರಿಲ್ 1909.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟ್ ದೊಡ್ಡಬಳ್ಳಾಪುರ ತಾಲ್ಲೂಕು ರಾಮದೇವನಹಳ್ಳಿ ಗ್ರಾಮದಲ್ಲಿರುವ ಹಜಾಂ ರಾಮನಂಬುವನು ಬುರ್ಡಸಾಬಿ ಹತ್ತಲಿನಲ್ಲಿ ಅಗಿಯುತ್ತಿರುವಾಗ ಒಂದು ಸಂಣ ಮಣ್ಣಿನ ಮಗೆಯಲ್ಲಿ ಈ ಕೆಳಗೆ ವಿವರಿಸುವ ಭಂಗಾರದ ಆಭರಣಗಳು ಸಿಕ್ಕಿರುತ್ತವೆಂದು ಸದರಿ ರಾಮನಿಂದ ತಿಳಿಯಲ್ಪಟ್ಟಿರುತ್ತೆ. ಸದರಿ ಆಭರಣಗಳಿಗೆ ಯಾರಾದರೂ ಹಕ್ಕುದಾರರಾಗಿದ್ದಪಕ್ಷದಲ್ಲಿ ಈ ನೋಟಿಫಿಕೇಷ್ನ ಗೆಜೆಟ್ಟಿನಲ್ಲಿ ಪ್ರಾಯಿಷಾದ ಲಾಗಾಯಿತು ಆರು ತಿಂಗಳೊಳಗೆ ತಮ್ಮ ಹಕ್ಕನ್ನು ದೊಡ್ಡಬಳ್ಳಾಪುರ ಸಬ್ ಡಿವಿಜನ್ ಆಫೀಸರವರ ರೂಬು ರೂಬು ತಾವೇ ಆಗಲೀ ಅಥವಾ ಲಾಯರ್ ಮುಖಾಂತ್ರವೇ ಆಗಲಿ ಹಾಜರಾಗಿ ಸ್ಥಿರಪಡಿಸಿಕೊಳ್ಳತಕ್ಕದ್ದು. ಹಾಗೆ ತಪ್ಪಿದ ಪಕ್ಷದಲ್ಲಿ ಮೈಸೂರು ಸೀಮೆಯ "ಟ್ರೆಜರ್‌ಟ್ರವ್" ರೂಲ್ಸ್ 5‌ನೆ ಸೆಕ್ಷ್ನ್ ಅನುಸರಿಸಿ ವಿಲೆ ಮಾಡಲ್ಪಡುತ್ತೆ.

ಭಂಗಾರದ ಆಭರಣಗಳ ವಿವರ.

ಸವರ್ಣ ಬಣ್ಣ ಭಂಗಾರದ ಬೆಂಡುವಾಲೆ ಜೊತೆ 1‌ಕ್ಕೆ ತೂಕ 1 ವರಹ 3 ಹಣ.
ವರಹಬಣ್ಣ ಭಂಗಾರದ ತಾಳಿಗಳು 7‌ಕ್ಕೆ ತೂಕ $1\frac{3}{4}$ ವರಹ.
ಕಣಬಣ್ಣ ಭಂಗಾರದ ಗಟ್ಟು 1‌ಕ್ಕೆ ತೂಕ 1 ವರಹ 11 ತೂಕ.

ಬಿ. ಜೆ. ಕೊಮಾರಸ್ವಾಮಿ ನಾಯಿಕ್, ಡೆಪ್ಯೂಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟ್.
ಇ ಸ್ಟೆ ಹಾ ರ್.

ತಾರೀಖು 22‌ನೆ ಏಪ್ರಿಲ್ 1909‌ನೆ ಇಸವಿ.

ಸ॥ 1909‌ನೆ ಇಸವಿ ಜುಲೈ ಮೊಹೆ ತಾರೀಖು 1ರ ಲಾಗಾಯಿತು 1910‌ನೆ ಇಸವಿ ಜೂ॥ ಮೊಹೆ ತಾರೀಖು 30ರ ವರಿಗೆ ಈ ಕೆಳಗೆ ಎ. ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲು ಗೇಟುಗಳ ಮುಖಾಂತರ ಸಿಟಿ ವಳಕ್ಕೆ ಬರುವ ಗಾಡಿಗಳು, ಜಾನುವಾರುಗಳು ವಗೈರೆಗಳ ಮೇಲೆ, ಬಿ. ಷೆಡ್ಯೂಲಿನಲ್ಲಿ ನಮೂದಾಗುವ ದರದಂತೆ ಸಿಟಿ ಮ್ಯುನಿಸಿಪಲ್ ರೆಗ್ಯುಲೇಷ್ನ 78 ಮತ್ತು 79‌ನೆ ಸೆಕ್ಷ್ನ್‌ಗಳಲ್ಲಿ ನಮೂದಿಸುವ ಪ್ರಕಾರ ಸುಂಕ ವಸೂಲು ಮಾಡಲಿಕ್ಕೆ ಮೈಸೂರು ಸಿಟಿ ಮ್ಯುನಿಸಿಪಲ್ ಕಮಿಷನರ್ ಸಾಹೇಬರವರು ಹುಕುಮು ಮಾಡಿರುತ್ತಾರೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ. ಷೆಡ್ಯೂಲಿನಲ್ಲಿ ನಮೂದಾಗುವ ರೇಟಿನಂತೆಯೇ ಗೇಟುಗಳ ಮುಖಾಂತರ ಸಿಟಿ ವಳಕ್ಕೆ ಬರುವ ಗಾಡಿ ವಗೈರೆಗಳ ಮೇಲೆ ಟೋಲು ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡ ಕೂಡದು. ಶಿವಾಯಿ ಪ್ರೆಸಿಡೆಂಟರವರಿಂದ ವಿಧಾಯಕಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಸಾಲ್ಮಾಹೆ ತಾರೀಖು ನಿಸಿ ಟೋಲು ಪಾವತಿ ಮಾಡತಕ್ಕ ಆಸಾಮಿಗಳಿಗೆ ರಸೀದಿ ಕೊಡಬೇಕು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲೀ ಅಥವಾ ಮತ್ಯಾವ ದರವನ್ನೇ ಆಗಲಿ ಮುಂಜೂರು ಮಾಡುವ ಅಧಿಕಾರವು ಪ್ರೆಸಿಡೆಂಟರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು 10‌ನೆ ತಾರೀಖು ವಳಗಾಗಿ ಹಿಂದಣ ಮಾಹೆಯ ಖಿಸ್ತು ಮೊಬಲಗನ್ನು ಪಾವತಿ ಮಾಡಬೇಕು. ಹರಾಜು ಖೈದಾದ ಕೂಡ್ಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟರು ಎರಡು ಮಾಹೆಗಳ ಖಿಸ್ತಿಗೆ ಸಮವಾದ ಮೊಬಲಗನ್ನು ಡಿಪಾಜಿಟ್ ಬಗ್ಗೆ ಹಾಜರ್ಮಾಡಬೇಕು. ಪರತ್ತುಗಳ ಪ್ರಕಾರ ಕಂಟ್ರಾಕ್ಟು ನಡದರೆ ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮೆಗೆ ತೆಗದುಕೊಳ್ಳುತ್ತೆ.

5. ಹರಾಜು ಖೈದಾದ ಕೂಡ್ಲೆ ಡಿಪಾಜಿಟ್ ಬಗ್ಗೆ ಮೊಬಲಗನ್ನು ಹಾಜರ್ಮಾಡದೆ ಇದ್ದರೆ ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ದರಖಾಸ್ತುದಾರನನ್ನು ಗುರಿಪಡಿಸಿ ಪುನಹಾ ಹರಾಜು ಮಾಡಿಸುತ್ತೆ. ಖಿಸ್ತು ಮೊಬಲಗು ವಾಯಿದೆವಳಗೆ ಹಾಜರ್ಮಾಡಲು ತಪ್ಪಿದರೆ ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗದುಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಿ ಅದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅವಲ್ ದರಖಾಸ್ತುದಾರನನ್ನು ಗುರಿಪಡಿಸುತ್ತೆ. ಎರಡನೆ ಹರಾಜಿನಲ್ಲಿ ನಫೆಬಂದಲ್ಲಿ ಮೊದಲು ದರಖಾಸ್ತುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಪ್ರತಿ ಒಬ್ಬ ಕಂಟ್ರಾಕ್ಟರು ರೋಜೀನಾ ಟೋಲುಗೇಟುಗಳ ಮುಖಾಂತರ ಪ್ರವೇಶಮಾಡುವ ತರಹಾವಾರಿ ಗಾಡಿ ಯಾ ಜಾನುವಾರುಗಳು ಇವುಗಳ ಮೇಲೆ ವಸೂಲಾದ ಟೋಲುದಾನೆ ಸುಂಕ ಇವುಗಳ ತಪಸೀಲು ತೋರಿಸುವ ಲೆಖ್ಕವನ್ನು ಪ್ರೆಸಿಡೆಂಟರವರು ವಿಧಾಯಕ ಮಾಡುವ ನಮೂನೆಯಲ್ಲಿಟ್ಟು ಅಂಥಾ ಲೆಖ್ಕವನ್ನು ಕಂಟ್ರಾಕ್ಟರು ಪ್ರತಿ ಮಾಹೆಯಲ್ಲಿಯೂ ಪ್ರೆಸಿಡೆಂಟರವರ ಇನ್‌ಸ್ಪೆಕ್ಷ್ನ ಬಗ್ಗೆ ಹಾಜರ್ಮಾಡಬೇಕು ಶಿವಾಯಿ ಸಾಯರು ಅಥವಾ ಮ್ಯುನಿಸಿಪಲ್ ಉದ್ಯೋಗಸ್ಥರು ಅಪೇಕ್ಷಿಸಿದಾಗ ಅಂಥಾ ಲೆಖ್ಕಗಳನ್ನು ಅವರ ಇನ್‌ಸ್ಪೆಕ್ಷ್ನ ಬಗ್ಗೆ ಹಾಜರ್ಮಾಡುವದಕ್ಕೂ ಬದ್ಧನಾಗಿರತಕ್ಕದ್ದು.

7. ಪ್ರತಿ ಒಬ್ಬ ಕಂಟ್ರಾಕ್ಟರು ಟೋಲುಗೇಟುಗಳ ಮುಖಾಂತರ ಬರತಕ್ಕ ಗಾಡಿ ಯಾ ಜಾನುವಾರುಗಳ ತಪ್ಸೀಲುಗಳ ಲೆಖ್ಕವನ್ನು 6‌ನೆ ಕಲಂನಲ್ಲಿ ನಮೂದಿಸಿರುವಂತೆ ಇಡತಕ್ಕ ಬಗ್ಗೆ ಆಯಾಯ ಕಂಟ್ರಾಕ್ಟ್‌ದಾರನ ಸ್ವಂತ ಖರ್ಚಿನಿಂದ ಪ್ರತಿ ಒಂದು ಟೋಲು ಗೇಟನಲ್ಲಿಯೂ ಒಬ್ಬೊಬ್ಬ ಮುತ್ಸದ್ದಿಯನ್ನು ಇಡವದಕ್ಕೆ ಬದ್ಧನಾಗಿರತಕ್ಕದ್ದು.

8. ಹಾಲಿ ಇರುವ ಟೋಲು ಗೇಟುಗಳನ್ನು ಮತ್ತು ಮನೆಗಳನ್ನು ಕಂಟ್ರಾಕ್ಟರು ಒಳ್ಳೇ ಸ್ಥಿತಿಯಲ್ಲಿ ಇಟ್ಟುಕೊಂಡು ಅ ವುಗಳನ್ನು ಉಪಯೋಗ ಮಾಡಿಕೊಳ್ಳಬಹುದು.

9. ಈ ಮೇಲ್ಕಂಡ ಷರತ್ತುಗಳಿಗೆ ವಳಪಟ್ಟು ಕಂಟ್ರಾಕ್ಟು ಬಾಬನ್ನು ಸಲೀಸು ನಡೆಸಿಕ್ಕೊಂಡು ಹೋಗತಕ್ಕ ವಿಚಾರ ದಲ್ಲಿ ಕಂಟ್ರಾಕ್ಟರು ಪ್ರೆಸಿಡೆಂಟರವರಿಂದ ವಿಧಾಯಕವಾದ ನಮೂನೆಯಲ್ಲಿ ಛಾಪಾ ಕಾಗದದಲ್ಲಿ ರೂಲ್ಸುಪ್ರಕಾರ ಮುಚ್ಚಳಿಕೆ ಬರ ದುಕೊಡಬೇಕು.

10. ಈ ಕೆಳಗೆ ನಮೂದಾಗುವವುಗಳಮೇಲೆ ಕಂಟ್ರಾಕ್ಟರುಗಳು ಟೋಲನ್ನು ವಸೂಲ್ಮಾಡಕೂಡದು.

(1) ಮ್ಯುನಿಸಿಪಾಲಿಟಿಗೆ ತೆರಿಗೆ ಪಾವತಿಮಾಡಿ ನಂಬರು ಹಾಕಿಸಿಕ್ಕೊಂಡಿರತಕ್ಕ ಗಾಡಿಗಳು ಅಥವಾ ಕ್ಯಾರೇಜುಗಳು, ಮ್ಯುನಿಸಿಪಾಲಿಟಿಯಿಂದ ಪಡೆದಿರತಕ್ಕ ಪ್ಯಾಸುಗಳನ್ನು ಹಾಜರ್ಮಾಡುವ ಗಾಡಿಗಳು ಅಥವಾ ಜಾನುವರುಗಳು ಮತ್ತು ಗಾರ್ನಮೆಂಟ್ ಯಾ ಮ್ಯುನಿಸಿಪಲ್ ಕಾರ್ಯಸಿದ್ಧಿಗೆ ಸೇರಿದ ಅಥವಾ ಸಾಮಾನು ವಗೈರೆ ಸಾಗಿಸುವದಕ್ಕಾಗಿ ಮೊಕರೂರ್ ಮಾಡಲ್ಪಟ್ಟ ಕ್ಯಾರೇ ಜುಗಳು, ಗಾಡಿಗಳು ಮತ್ತು ಜಾನುವರುಗಳ ಮೇಲೆ ಮತ್ತು ಒಂದು ದಿವಸದಲ್ಲಿ 24 ಘಂಟೆ ಕಾಲದೊಳಗಾಗಿ ಅಂದರೆ ಒಂದು ಮಧ್ಯರಾತ್ರಿಯಿಂದ ಇನ್ನೊಂದು ಮಧ್ಯರಾತ್ರಿಯ ವರಿಗೂ ಯಾವ ಕ್ಯಾರೇಜು ಗಾಡಿ ಅಥವಾ ಜಾನುವರುಗಳ ಮೇಲೆಯೇ ಆಗಲಿ ಒಂದು ಸಾರಿಗಿಂತಲೂ ಹೆಚ್ಚಾಗಿ ಟೋಲು ವಸೂಲ್ಮಾಡಕೂಡದು.

(2) ಟೋಲುಗೇಟು ಮುಖಾಂತರ ಬರತಕ್ಕ ಸೈನಿಕರ ವಾಹನಕ್ಕಾಗಿ ಅಥವಾ ಅಂಥಾ ಸೈನಿಕರ ಸಾಮಾನು ವಗೈರೆ ಸಾ ಗಿಸತಕ್ಕ ಬಗ್ಗೆ ಉಪಯೋಗಿಸುವ ಗಾಡಿ ಅಥವಾ ಜಾನುವರುಗಳಮೇಲೆ ಮಿಲಿಟರಿ ಅಥವಾ ಗಾರ್ನಮೆಂಟ್ ಸ್ಟೋರಿಗೆ ಸಾಗಿಸಲ್ಪ ಡುವ ಸಾಮಾನುಗಳು ಇರತಕ್ಕ ಗಾಡಿ ಅಥವಾ ಜಾನುವರುಗಳಮೇಲೆ, ಸರ್ಕಾರಿ ಡ್ಯೂಟಿಯಮೇಲೆ ಬರತಕ್ಕ ಪೋಲೀಸು ಆಫಿಸ ರು ನೌಕರಮಾನೇರು ಮತ್ತು ಅವರಿಗೆ ಸಂಬಂಧಪಟ್ಟ ಜನಗಳು ಮತ್ತು ಸಾಮಾನುಗಳು ಇರುವ ಅವರ ಕ್ಯಾರೇಜುಗಳು ಜಾ ನುವರುಗಳು ಇವುಗಳಮೇಲೆ ಮತ್ತು ಅರಮನೆ ಇಲಾಖೆಗೆ ಸೇರಿದ ಕ್ಯಾರೇಜುಗಳು ಜಾನುವರುಗಳಮೇಲೆ ಸಹಾ.

ಎ. ಷೆಡ್ಯೂಲ್.

ನಂಬರು.	ರಸ್ತೆಗಳ ಹೆಸರು.	ಉಕ್ಕಡಗಳ ಹೆಸರು.
1	ರೈಲ್ವೆಸ್ಟೇಷನ್ ರಸ್ತೆ ...	ಬಳಗೊಳದ ರಸ್ತೆ ಮತ್ತು ಸಿಕ್ ಲೈನ್ ರಸ್ತೆ ಇವೆರಡು ಜಂಕ್ಷನ್ ಆಗುವ ಸ್ಥಳದಲ್ಲಿರುವ ಉಕ್ಕಡ
2	ಬಳಗೊಳದ ರಸ್ತೆ ...	ಕೆಂಪನಕಟ್ಟೆ ಉಕ್ಕಡ
3	ಶ್ರೀರಂಗಪಟ್ಣದ ರಸ್ತೆ ...	ಎರಕಟ್ಟೆ ಉಕ್ಕಡ
4	ಬೆಂಗಳೂರು ರಸ್ತೆ ...	ವೀರಣಗೆರೆ ಉಕ್ಕಡ
5	ಸಿಮಿಟೆರಿ ರಸ್ತೆ ...	ಬಂಗ್ಲಿ ಸಂತೆ ಉಕ್ಕಡ
6	ಮಹದೇವಪುರದ ರಸ್ತೆ ...	ಜಲಪುರಿ ಉಕ್ಕಡ
7	ಆಲನಹಳ್ಳಿ ರಸ್ತೆ ...	ಇಟ್ಟಿಗೆಗೂಡು ಉಕ್ಕಡ
8	ರೇಸ್‌ಕೋರ್ಸ್ ರಸ್ತೆ ...	ರೋಣಸಂತೆ ಉಕ್ಕಡ
9	ನಂಜನಗೂಡು ರಸ್ತೆ ...	ನಂಜನಗೂಡು ಉಕ್ಕಡ
10	ಡಿಟೋ ...	ಹಾಲಿ ಉಕ್ಕಡದ ಬಳಿ ವಿಧಾಯಕ ಮಾಡಿರುವಂತೆ ನಾಚನಹಳ್ಳಿ ಉಕ್ಕಡ.
11	ಮಾನಂದವಾಡಿ ರಸ್ತೆ ...	ಚಟ್ಟನಹಳ್ಳಿ ಉಕ್ಕಡ
12	ಮೈಸರಾಯಿ ರಸ್ತೆ ...	ಹೊಲಗೇರಿ ಉಕ್ಕಡ
13	ಚಾಮರಾಜ ಆಗ್ರಹಾರದ ಹಿಂಭಾಗದ ರಸ್ತೆ ...	ಡಿಟೋ
14	ಜಾಬಿಲಿ ರಸ್ತೆ ...	ಕುಕ್ಕನಹಳ್ಳಿ ಉಕ್ಕಡ
15	ಇಲವಾಲದ ರಸ್ತೆ ...	ಶ್ರೀರಂಪೇಟೆ ಉಕ್ಕಡ

ಬಿ. ಷೆಡ್ಯೂಲ್.

ನಂಬರು.	ತಪಶೀಲು.	ದರ. ರೂ.	ಆ.	ಪೈ.
1	ಸ್ಪ್ರಿಂಗು ಇರತಕ್ಕ ಪ್ರತಿ ಒಂದು ನಾಲ್ಕು ಚಕ್ರದ ಕ್ಯಾರೇಜಿಗೆ	0	4	0
2	ಡಿಟೋ ಎರಡು ಚಕ್ರದ ಕ್ಯಾರೇಜಿಗೆ	0	2	0
3	ಮನುಷ್ಯರು ಯಾ ಎತ್ತುಗಳು, ಕುದುರೆಗಳು, ಹೇಸರ ಕತ್ತೆಗಳು ಇವುಗಳಿಂದ ಎಳೆಯಲ್ಪಟ್ಟ ಭರ್ತಿ ಗಾಡಿಗಳು ಅಥವಾ ಹ್ಯಾಕ್ನಿ ಗಾಡಿ ಒಂದಕ್ಕೆ.	0	2	0
4	ಖಾಲಿ ಇರತಕ್ಕ ಪ್ರತಿ ಒಂದು ಗಾಡಿಗೆ	0	1	0
5	ಹೇರು ಹೇರಿಕ್ಕೊಂಡು ಇರತಕ್ಕ ಕೋಣ ಯಾ ಎತ್ತು 1ಕ್ಕೆ	0	0	6
6	ಸವಾರಿ ಅಥವಾ ಹೇರು ಹೇರಿಕೆ ಇಲ್ಲದೆ ಇರತಕ್ಕ 13 ಹಿಡಿಗಳಿಗಿಂತಲೂ ಮಿಗಿಲಾದ ಕುದುರೆ 1ಕ್ಕೆ	0	1	0
7	ಹೇರು ಇಲ್ಲದೆ ಅಥವಾ ಸವಾರಿ ಇಲ್ಲದೆ ಇರತಕ್ಕ ಕುದುರೆ 1ಕ್ಕೆ	0	0	6
8	13 ಹಿಡಿ ಅಥವಾ ಅದಕ್ಕಿಂತ ಕಮ್ಮಿಯಾಗಿರತಕ್ಕ ಸವಾರಿ ಅಥವಾ ಹೇರು ಇರುವ ಕುದುರೆ 1ಕ್ಕೆ	0	0	6
9	ಆನೆ	0	8	0
10	ಒಂಟೆ	0	1	0

ಎಂ. ಜಿ. ಕೃಷ್ಣಸ್ವಾಮಿರಾವ್, ಛೇರ್‌ಮನ್ ಪ್ರೆಸಿಡೆಂಟ್.